ಕೂಟವನ್ನು ಏರ್ಪಡಿಸಿದ್ದಾರೆ, ಅದಕ್ಕೆ ತಾವೆಲ್ಲರೂ ಪಾಲ್ಗೊಳ್ಳಬೇಕೆಂದು ವಿನಂತಿಸಿಕೊಳ್ಳಲಾಗಿದೆ.

ಈಗ ಸದನವನ್ನು ಮುಂದೂಡಿ ಊಟವಾದ ನಂತರ ಪುನಃ 3.00 ಗಂಟೆಗೆ ಸೇರಲಾಗುವುದು.

(ಸದನದ ಕಲಾಪವು ಮಧ್ಯಾಹ್ನ 1 ಗಂಟೆ 58 ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ಊಟವಾದ ನಂತರ 3.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಭೋಜನ ನಂತರ ಮತ್ತೆ ಸಭೆ ಮಧ್ಯಾಹ್ನ 3.08 ಗಂಟೆಗೆ ಸಮಾವೇಶಗೊಂಡಿತು ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

(ಸಭೆಯ ಪ್ರಾರಂಭದಲ್ಲಿ ಜೆಡಿಎಸ್ ಸದಸ್ಯರು ಸದನದ ಬಾವಿಯಲ್ಲಿ ಧರಣಿ ಮಾಡುತ್ತಿದ್ದರು)

ಅಧ್ಯಕ್ಷರು:– ಈಗ ಮಾನ್ಯ ಮುಖ್ಯಮಂತ್ರಿಯವರು ಹಾಗೂ ಇಂಧನ ಇಲಾಖೆಯ ಸಚಿವರು in principle ಒಂದು ನಿರ್ಧಾರಕ್ಕೆ ಬಂದಿದ್ದಾರೆ. ಮಾನ್ಯ ಇಂಧನ ಸಚಿವರು ಇಲ್ಲೇ ಇದ್ದಾರೆ. ತಾವೇ ಹೇಳುತ್ತಿರಾ.....

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು):– ಮಾನ್ಯ ಅಧ್ಯಕ್ಷರೆ, averse to anuthing. ಈಗ ಮಾನ್ಯ ಮುಖ್ಯಮಂತ್ರಿಯವರು ಬರುತ್ತಾರೆ. ಅವರು ಬಂದು announce ಮಾಡುತ್ತಾರೆ. He will tell his opinion.

ಅಧ್ಯಕ್ಷರು:– ಸದನ ನಡೆಸೋಣ.

(ಸದನದ ಬಾವಿಯಲ್ಲಿ ಜೆಡಿಎಸ್ ಸದಸ್ಯರು ಮಾತನಾಡುತ್ತಿದ್ದರು)

ಶ್ರೀ ಡಿ.ಕೆ. ಶಿವಕುಮಾರ್ :– ಅಯಿತು, ಎಲ್ಲಾ ಮಾತನಾಡಿದ್ದಿರಲ್ಲಾ, ಈಗ ಒಳಗಡೆ ಏನು ಮಾತನಾಡಿದ್ದಾರೋ ಅದನ್ನು ಸಿ.ಎಂ. ಬಂದು ಹೇಳುತ್ತೇನೆಂದು ಹೇಳಿದ್ದಾರೆ. We will definitely tell you. ಬನ್ನಿ ಕೆಲಸ ಮಾಡಿಕೊಳ್ಳೋಣ. Please come, don't worry.